19. Bangalore
20. Bangalore
21. Bangalore
22. Bangalore
23. Chitradurga
24. Mysore
25. Bangalore
26. Mysore
27. Mysore
28. Mysore
29. Inamati
30. Chennapatna
31. Thukadibandhalli
32. Kadur
33. Bangalore
34. Mysore.

Sri C. J. MUCKANNAPPA.—Is it not detrimental to the object for which loan is given, as many of the places do not happen to be rural areas ?

Sri B. D. JATTI.—The intention of Government is to help individuals and concerns who want some aid. Some people came forward from Bangalore and Government has given them aid, but Government has never denied giving any aid to people coming from rural parts.

Sri L. S. VENKAJI RAO.—What is the total money lent ?

Sri B. D. JATTI.—I have no figure at hand.

Sri F. H. MOHSIN.—Are there any applications from Gubbi constituency for such aid ?

Sri B. D. JATTI.—Government has no information.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಸಾಲ ಪಡೆಯುವುದಕ್ಕೆ ಯಾರದಾದರೂ ಶಿಫಾರಸು ಬೇಕಾಗುತ್ತದೆಯೇ ?

Sri B. D. JATTI.—The departmental heads will look into the matter. If they find that a case is a deserving one, they will recommend.

ಶ್ರೀ ಎಂ. ಎಸ್. ಪಟ್ಟಣ್.—ಈ ಲೋನ್‌ಕೊಡುವ ಸಂಬಂಧದಲ್ಲಿ ಹಳೆಯ ಮೈಸೂರು ಹೊಸ ಮೈಸೂರು ಪ್ರದೇಶಗಳಿಗೆ ಒಂದೇ ನಿಯಮ ಅನ್ವಯಿಸುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಈಗ ಇರುವುದು ಹಳೆಯ ಮೈಸೂರಿಗೆ ಸಂಬಂಧಪಟ್ಟದ್ದಾಗಿದೆ.

ಶ್ರೀ ಎಂ. ಎಸ್. ಪಟ್ಟಣ್.—ಹೊಸ ಮೈಸೂರು ಭಾಗದಲ್ಲಿ oil millಗೆ loan ಕೊಡುವುದಿಲ್ಲ ಎಂಬುದಕ್ಕೆ ತಕರಾರು ಏನಾದರೂ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ತಕರಾರು ಏನೂ ಬಂದಿಲ್ಲ. ಯೂನಿಫಾರಂ ಕಾನೂನು ಮಾಡುವದಕ್ಕೆ ಸರಕಾರ ಸಿದ್ಧವಾಗಿದ್ದಾರೆ. ಯೂನಿಫಾರಂ ಕಾನೂನು ಆಗುವವರೆಗೆ ಸ್ವಲ್ಪ ತೊಂದರೆಯಾಗಬಹುದು. ಯೂನಿಫಾರಂ ಕಾನೂನು ಮಾಡುವದಕ್ಕಾಗಿ ಇನ್‌ವೆಸ್ಟಿಗೇಷನ್ ಮುಂತಾದ್ದು ಪೂರ್ತಿಯಾಗಿವೆ.

ಶ್ರೀ ವೈ. ವೀರಪ್ಪ.—ಬೆಂಗಳೂರು ನಗರದಲ್ಲಿ ಲೋನ್ ಕೊಟ್ಟದ್ದು ಕೂಡ small scale industryಗೆ ಸಂಬಂಧಪಟ್ಟದ್ದಾಗಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಹೌದು.

ಶ್ರೀ ಯು. ಎಂ. ಮಾದಪ್ಪ.—ಅವುಗಳಲ್ಲಿ ಜಾಯಿಂಟ್ ಸ್ಟಾಕ್ ಕಂಪನಿಗಳೇನಾದರೂ ಇವೆಯೇ ?

ಶ್ರೀ ಬಿ. ಡಿ. ಜತ್ತಿ.—ವಿವರ ನನಗೆ ಗೊತ್ತಿಲ್ಲ.

Sri B. RACHIAH.—Out of these 34 grantees, how many unemployed educated people were given loans ?

Sri B. D. JATTI.—That detail is not with me. I will enquire into the matter.

Sri Y. VEERAPPA.—What steps have the Government taken to recover the balance from the defaulters ?

Sri B. D. JATTI.—The number of defaulters is five. Even if they have defaulted once or twice, they are now regularly paying.

Water Supply through tap to Talikot

Q.—1377. Sri K. A. PATIL (Talikot).—

Will the Government be pleased to state :—

(*a*) whether they are aware of the fact that a scheme for supply of water in Talikot village through taps was under the consideration of the former Bombay Government;

(*b*) if so, whether the Government propose to undertake the above scheme ;

(*c*) if so, the estimated expenditure thereof ;

(*d*) when they intend to accord sanction therefor ?

A.—Sri T. SUBRAMANYA (Minister for Law, Labour and Local Government).—

(*a*) Yes.

(*b*), (*c*) and (*d*) The scheme has been sanctioned by Government at an estimated cost of Rs. 4,03,000.

ಶ್ರೀ ಕೆ. ಎ. ಪಾಟೀಲ.—4,03,000 ರೂಪಾಯಿಗಳ ಈ ಸ್ಕೀಮು ಯಾವಾಗ ಮಂಜೂರು ಆಗಿದೆ ?

*Sri T. SUBRAMANYA.—This scheme was sanctioned on 24th April 1958.

ಶ್ರೀ ಕೆ. ಎ. ಪಾಟೀಲ.—ಹಾಗಾದರೆ ಈ ಕೆಲಸವನ್ನು ಯಾವಾಗ ಪುರು ಮಾಡುತ್ತೀರಿ?

ಶ್ರೀ ಟಿ. ಸುಬ್ರಹ್ಮಣ್ಯ.—ಪ್ರಾರಂಭ ಮಾಡಲಕ್ಕೆ ಅಡಚಣೆಯೊಂದು ಇದೆ. ಮುಂಬಯಿ ಸರಕಾರದ ಸ್ಕೀಮ್ ಪ್ರಕಾರ ನಾಲ್ಕು ಲಕ್ಷ ಚಿಲ್ಲರೆ ರೂಪಾಯಿಗಳ ಎಸ್ಟಿಮೇಟು ಆಗಿದೆ. ಅದರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಆ ಊರಿನವರು ಕೊಡಬೇಕು. ಈಗಾಗಲೇ ಆ ಊರಿನವರು 70 ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇನ್ನು ಉಳಿದ ಒಂದು ಲಕ್ಷ 31 ಸಾವಿರ ರೂಪಾಯಿ ಸಾಲ ಎತ್ತಿ ಕೊಡಬೇಕಾಗಿದೆ ಎಂಬುದು ಒಂದು ಅಡಚಣೆ. ಇನ್ನು ಎರಡನೆಯದು ಏನೆಂದರೆ ಆ ಊರಿನ ಜನಸಂಖ್ಯೆ ಐದು ಸಾವಿರಕ್ಕಿಂತ ಹೆಚ್ಚಾಗಿರುವದರಿಂದ ಇದನ್ನು ಕೇಂದ್ರ ಸರಕಾರದವರು ಸಾಂಕ್ಷನ್ ಮಾಡಬೇಕಾಗಿದೆ. ಈ ಸ್ಕೀಮನ್ನು special case ಎಂದು consider ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಕಾಗದ ಬರೆದಿದ್ದೇವೆ. ಇನ್ನೂ ಅದಕ್ಕೆ ಅವರಿಂದ ಉತ್ತರ ಬಂದಿಲ್ಲ.

ಶ್ರೀ ಬಿ. ಕೆ. ನಾಗೂರ್.—ತಾಳೀಕೋಟೆಯ ಜನರಿಂದ ಒಂದು ಲಕ್ಷ 30 ಸಾವಿರ ರೂಪಾಯಿ ಬಂದ ಕೂಡಲೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಾ ಅಥವಾ ಅದನ್ನು ಪ್ರಾರಂಭ ಮಾಡುವುದಕ್ಕೆ ಏನಾದರೂ ಕಾಲಾವಕಾಶ ಬೇಕಾಗುತ್ತದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ತಾಳೀಕೋಟೆಯ ಜನರಿಂದ ಒಂದು ಲಕ್ಷ 31 ಸಾವಿರ ರೂಪಾಯಿ ಡಿಪಾಜಿಟ್ ಆದಮೇಲೆ ಗವರ್ನಮೆಂಟ್ ಆಫ್ ಇಂಡಿಯಾ ಸಾಂಕ್ಷನ್ ಬಂದ ತತ್‌ಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಕೆ. ನಾಗೂರ್.—ಇನ್ನು ತಾಳಿಕೋಟೆಯ ಜನರು ಕೊಡಬೇಕಾಗಿರುವ ಒಂದು ಲಕ್ಷ 31 ಸಾವಿರ ರೂಪಾಯಿ ಸಾಲ ಎತ್ತಲಕ್ಕೆ ಪರವಾನಗಿ ಕೊಡುತ್ತೀರಾ?

ಶ್ರೀ ಟಿ. ಸುಬ್ರಹ್ಮಣ್ಯ.—ಪಂಚಾಯಿತಿಯವರಿಗೆ ಸಾಲ ಎತ್ತಲಕ್ಕೆ ಅನುಮತಿ ಕೊಟ್ಟಿದೆ. ಸಾಲ ಎತ್ತಬಹುದು.

ಶ್ರೀ ಕೆ. ಎ. ಪಾಟೀಲ.—ಕೇಂದ್ರ ಸರಕಾರದ ಸಾಂಕ್ಷನ್ ಬಾರದೇ ಇದ್ದರೂ ಸಹ ಕೆಲಸ ಪ್ರಾರಂಭ ಮಾಡುತ್ತೀರಾ?

Sri T. SUBRAMANYA.—Government of India sanctionಗಾಗಿ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಪ್ರಯತ್ನ ಫಲಕಾರಿಯಾಗುತ್ತದೆಂದು ನನಗೆ ನಂಬಿಕೆ ಉಂಟು.

ಶ್ರೀ ಕೆ. ಎ. ಪಾಟೀಲ.—ಈಗ ಸಾಂಕ್ಷನ್ ಆಗಿರುವುದು ಏನೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಸ್ಕೀಮಿಗೆ ಟೆಕ್ನಿಕಲ್ ಸಾಂಕ್ಷನ್ ಆಗಿದೆ, ಏರೆಡ್ ಪಂಚಾಯಿತಿಯು ಒಪ್ಪಿಕೊಂಡಿದ್ದಾರೆ, ಸರಕಾರವೂ ಸಹ ಒಪ್ಪಿಕೊಂಡಿದ್ದಾರೆ ಇನ್ನು ದುಡ್ಡು ಮಾತ್ರ ಒದಗಿಸುವ ಬಗ್ಗೆ ಇರುವುದು.

ಒಬ್ಬ ಸದಸ್ಯರು.—ತಾವೇಏಕೆ ಅವರಿಗೆ ಸಾಲ ಕೊಡಬಾರದು?

ಶ್ರೀ ಟಿ. ಸುಬ್ರಹ್ಮಣ್ಯ.—ಅವರು ಹಾಗೆ ಕೇಳಿದರೆ ಅದನ್ನು ವಿಮರ್ಶೆ ಮಾಡುತ್ತೇವೆ.

ಶ್ರೀ ಕೆ. ಎ. ಪಾಟೀಲ.—ಯಾವ ರೂಲಿನ ಪ್ರಕಾರ ಈ ಸ್ಯಾಂಕ್ಷನ್ ಪಡೆಯಬೇಕೆಂದು ಇದೆ?

ಶ್ರೀ ಟಿ. ಸುಬ್ರಹ್ಮಣ್ಯ.—ಬೊಂಬಾಯಿ ಗವರ್ನಮೆಂಟ್ ಸ್ಕೀಮ್ ಒಂದು ಆ ಕಡೆ ಇದೆ, ಅದರ ಪ್ರಕಾರ ಅರ್ಧದಷ್ಟು ಹಣವನ್ನು ಹಳ್ಳಿಯವರು ಇದಕ್ಕಾಗಿ ಕೊಡಬೇಕು. ಉಳಿದ ಅರ್ಧದಷ್ಟು ಹಣವನ್ನು ರಾಜ್ಯಸರಕಾರದವರು ಕೇಂದ್ರ ಸರಕಾರದಿಂದ ಹಣ ಪಡೆದು ಒದಗಿಸುತ್ತಾರೆ. ಆಮೇಲೆ ಕೆಲಸ ಪ್ರಾರಂಭ ಮಾಡಲಾಗುವುದು. ಆ ಪ್ರಕಾರ ಏರೇಜ್ ಪಂಚಾಯಿತಿಯವರು ಒಪ್ಪಿಕೊಂಡಿದ್ದಾರೆ. ಎರಡು ಲಕ್ಷ ಚಿಲ್ಲರೆ ಹಣದಲ್ಲಿ ಈಗಾಗಲೇ 60 ಸಾವಿರ ರೂಪಾಯಿ ಡಿಪಾಜಿಟ್ ಮಾಡಿದ್ದಾರೆ. ಉಳಿದ ಹಣವನ್ನು ಸಾಲ ಎತ್ತಿ ಕೊಡುವುದಕ್ಕೆ ಒಪ್ಪಿಗೆಯನ್ನು ಕೇಳಿದ್ದಾರೆ.

Sri G. SIVAPPA.—Is it not a fact that according to the Government of India rules for national rural water supply schemes in the rural areas, the people have to pay only one-fourth of the sanctioned amount?

Sri T. SUBRAMANYA.—That does not apply to Bombay area.

ಶ್ರೀ ಎಸ್. ವೈ. ಪಾಟೀಲ್.—ಬೊಂಬಾಯಿ ರೂಲ್ಸ್ ಪ್ರಕಾರ ಇದ್ದರೂ ಸಹಿತ ಅವರಿಗೆ ಇಲ್ಲಿ ರೂಲ್ಸ್ ಅನುಸರಿಸಿ ಮಾಡಿಕೊಟ್ಟರೆ ಏನು ತಪ್ಪಾಗುತ್ತದೆ?

ಶ್ರೀ ಟಿ. ಸುಬ್ರಹ್ಮಣ್ಯ.—ತಪ್ಪಾಗುವುದಿಲ್ಲ. ಅದು ಪುನಃ ಮಾಡುವುದಕ್ಕೆ ಹೋದರೆ ಕಾಲವಿಳಂಬವಾಗುತ್ತದೆ ಎಂದು ಅದೇ ಸ್ಕೀಂ ಮುಂದುವರಿಸುತ್ತಾ ಇದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೊಸದಾಗಿ ಸಮನ್ವಯ ಮಾಡುತ್ತೇವೆ ಎಂದು ಹೇಳಿದಿರಿ. ಇದು ಯಾವಾಗ ಪೂರ್ತಿ ಆಗುವುದು?

ಶ್ರೀ ಟಿ. ಸುಬ್ರಹ್ಮಣ್ಯ.—ಇವತ್ತು ನಾನು ಯಾವುದನ್ನು ಹೇಳುವುದಕ್ಕೂ ಅಸಮರ್ಥನಾಗಿದ್ದೇನೆ. ಪ್ರತಿಯೊಂದನ್ನೂ ಸಮನ್ವಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಹಿಂದಿನ ಸ್ಕೀಂ ಬಿಟ್ಟು ಬಿಟ್ಟು ಹೊಸ ಸ್ಕೀಂ ತೆಗೆದು ಕೊಂಡರೆ ಪೂರ್ವೇತಿ ಪೂರ್ವ ಅಂದ ಹಾಗೆ ಮೊದಲನಿಂದಲೂ ಪ್ರಾರಂಭ ಮಾಡಬೇಕಾಗುತ್ತದೆ. ಮೊದಲು ತೆಗೆದು ಕೊಂಡದ್ದಕ್ಕೆ ಗ್ರಾಂಟ್, ರೋನು ಕೊಡಬೇಕು. ಗ್ರಾಂಟ್ ರೂಪದಲ್ಲಿ ಅರ್ಧ, ರೋನು ರೂಪದಲ್ಲಿ ಅರ್ಧ ಕೊಡಬೇಕು. ಅವರೇ ಸಾಲ ಎತ್ತುತ್ತಾರೆ ಎಂದು ಹೇಳಿದ್ದರಿಂದ ಅದೇ ಸ್ಕೀಂ ನಡೆಯಲಿ ಎಂದು ಹೇಳಿದ್ದೇವೆ.

Construction of Shop Buildings at Elemallappa's Choultry, Bangarpet.

Q.—1471. Sri E. NARAYANA GOWDA (Bangarpet).—

Will the Government be pleased to state :—

(*a*) the particulars of plans and estimates sanctioned for construction of shop-bulidings in the Elemallappa Choultry, Bangarpet ;

(*b*) the work so far done in that behalf ;

(*c*) whether they have received any complaint from the public that the nearby public road has been encroached upon at the time of laying foundation stone of the above shop-buildings ;

(*d*) if so, the action taken by them on that complaint?